**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 791 |
| ಸದಸ್ಯರ ಹೆಸರು | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 21.08.2026 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ದಕ್ಷಿಣ ತಾಲ್ಲೂಕು ಮದಪಟ್ಟಣದ ಕಾವೇರಿ ಕ್ರಷರ್, ಕಲ್ಲು ಕ್ವಾರಿಯಲ್ಲಿ ಸಂಭವಿಸಿದ ಕುಸಿತದಲ್ಲಿ 7 ಕೂಲಿ ಕಾರ್ಮಿಕರು ಮೃತಪಟ್ಟಿದ್ದು ಈ ಘಟನೆಯ ದುರಂತಕ್ಕೆ ಕಾರಣವೇನು: | ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಹುಲುವೇನಹಳ್ಳಿ ಮತ್ತು ಮಾದಪಟ್ಟಣದ ಗ್ರಾಮದ ವ್ಯಾಪ್ತಿಯ ಕಾವೇರಿ ಕ್ರಷರ್‌ಗೆ ಸಂಬಂಧಿಸಿದ ಕಟ್ಟಡ ಕಲ್ಲುಗಣಿ ಗುತ್ತಿಗೆ ಹುಲುವೇನಹಳ್ಳಿ ಗ್ರಾಮದ ಸರ್ವೆ ನಂಬರ್.29ರ 6-20 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಮೆ\|\| ಬಸವೇಶ್ವರ ಸ್ಟೋನ್ ಕ್ರಷರ್ ಹೆಸರಿನ ಸಂಸ್ಥೆಯ ಮಾಲೀಕರಾದ ಶ್ರೀ ಡಿ.ಆನಂದಸ್ವಾಮಿ ರವರಿಗೆ ಮಂಜೂರಾಗಿರುವ ಕಲ್ಲು ಗಣಿ ಗುತ್ತಿಗೆ ಸಂಖ್ಯೆ: 834ರ ಕಲ್ಲು ಗಣಿ ಗುತ್ತಿಗೆ ಪ್ರದೇಶದಲ್ಲಿ ಕಲ್ಲುಗಣಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಪ್ರದೇಶದಲ್ಲಿನ **Fracture Plain** ಮೇಲಿನ **Weathered soil and Stone** ಜಾರಿ ಉತ್ತರ ದಿಕ್ಕಿಗೆ ಹೊಂದಿಕೊಂಡಂತೆ ಮಂಜೂರಾಗಿರುವ ಕಲ್ಲುಗಣಿ ಗುತ್ತಿಗೆ ಸಂಖ್ಯೆ: 581ರ ಪ್ರದೇಶಕ್ಕೆ ಜಾರಿರುವ ಕಾರಣ ಈ ದುರ್ಘಟನೆ ಸಂಭವಿಸಿರುತ್ತದೆ. |
| ಆ) | ಈ ಕಲ್ಲು ಕ್ವಾರಿಗೆ ಅಗತ್ಯವಿರುವ ಎಲ್ಲಾ ಕಾನೂನು ಬದ್ಧ ಪರವಾನಗಿಗಳು ಹಾಗೂ ಸುರಕ್ಷತಾ ಅನುಮತಿಗಳನ್ನು ನೀಡಲಾಗಿತ್ತೇ: ನಿಯಮಗಳನ್ನು ಉಲ್ಲಂಘಿಸಿರುವುದು ಕಂಡುಬಂದಿದೆಯೇ: (ಮಾಹಿತಿ ನೀಡುವುದು) | <u>ಕಲ್ಲು ಗಣಿ ಗುತ್ತಿಗೆ ಸಂಖ್ಯೆ: 834ರ ವಿವರ:</u><br>• ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಹುಲುವೇನಹಳ್ಳಿ ಗ್ರಾಮದ ಸ.ನಂ. 29ರ 6-20 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಶ್ರೀ ಡಿ. ಆನಂದಸ್ವಾಮಿ ರವರ ಮಾಲೀಕತ್ವದ ಸಂಸ್ಥೆಯಾದ ಮೆ\|\| ಬಸವೇಶ್ವರ ಸ್ಟೋನ್ ಕ್ರಷರ್ ಹೆಸರಿಗೆ ಕಲ್ಲು ಗಣಿ ಗುತ್ತಿಗೆ ಸಂಖ್ಯೆ: 834 ಅನ್ನು 20 ವರ್ಷಗಳ ಅವಧಿಗೆ ದಿನಾಂಕ: 27.02.2019 ರಿಂದ ಜಾರಿಗೆ ಬರುವಂತೆ ಗುತ್ತಿಗೆ ಕರಾರು ಅಮಲ್ಜಾರಿ ಮಾಡಲಾಗಿದ್ದು, ಸದರಿ ಗುತ್ತಿಗೆ ಅವಧಿಯು ದಿನಾಂಕ: 26-02-2039 ರವರೆಗೆ ಚಾಲ್ತಿಯಲ್ಲಿರುತ್ತದೆ.<br>• ಜಿಲ್ಲಾ ಪರಿಸರ ಅಘಾತ ಅಂದಾಜೀಕರಣ (**DEIAA**) ಪ್ರಾಧಿಕಾರದಿಂದ ಪತ್ರ ಸಂಖ್ಯೆ: **DEIAA/BNGU/201/ 2018-19** ದಿನಾಂಕ: 07-12-2018 ರಂದು ಕಲ್ಲು ಗಣಿಗಾರಿಕೆ ನಡೆಸಲು ಪರಿಸರ ವಿಮೋಚನಾ ಪತ್ರ ಪಡೆದಿರುತ್ತಾರೆ.<br>• ಕರ್ನಾಟಕ ಉಪಖನಿಜ ರಿಯಾಯಿತಿ ನಿಯಾಮವಳಿ 1994ರ ನಿಯಮ 8ಜಿ ರಂತೆ ಕಲ್ಲು ಗಣಿಗಾರಿಕೆ ನಡೆಸಲು ಕ್ವಾರಿ ಪ್ಲಾನ್ ಅನುಮೋದನೆಯಾಗಿದೆ ಹಾಗೂ 2023-24ನೇ ಸಾಲಿನಿಂದ 2027-28ನೇ ಸಾಲಿನವರೆಗೆ ಕ್ವಾರಿ ಪ್ಲಾನ್ ಚಾಲ್ತಿಯಲ್ಲಿರುತ್ತದೆ.<br>• ಕಲ್ಲುಗಣಿ ಗುತ್ತಿಗೆ ಸಂಖ್ಯೆ: 834ಕ್ಕೆ ಡಿ.ಜಿ.ಎಂ.ಎಸ್ ಸಂಸ್ಥೆಯಿಂದ **Labour Identification Number (LIN):- 2-6196-5761-2** ಹಾಗೂ **Mine Code: 5111801** ಅನ್ನು ಪಡೆದಿದ್ದು, ಸದರಿ ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ಸುರಕ್ಷಿತಾ ಗಣಿಗಾರಿಕೆ ಸಂಬಂಧ ಡಿ.ಜಿ.ಎಂ.ಎಸ್ ಸಂಸ್ಥೆಯಿಂದ **Metalliferous Mines Regulations 1961** ರನ್ವಯ ನಿಯಮ 106(2)(ಬಿ) ರಂತೆ ದಿನಾಂಕ: 03-03-2023 ರಂದು ಅನುಮತಿ ಪಡೆದಿದ್ದು, 05 ವರ್ಷಗಳ ವರೆಗೆ ಚಾಲ್ತಿಯಲ್ಲಿರುತ್ತದೆ. |
| ಇ) | ಘಟನೆಗೆ ಸಂಬಂಧಿಸಿದಂತೆ ಕ್ವಾರಿ ಮಾಲೀಕರು. ಗುತ್ತಿಗೆದಾರರು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕಾನೂನು ಕ್ರಮ ಕೈಗೊಂಡಿದೆ: | |

| | | |
|---|---|---|
| | | • **Second class Manager** ಹಾಗೂ **Mechanical Engineer** ರವರನ್ನು ನೇಮಕಗೊಂಡಿರುವ ಬಗ್ಗೆ **Certificate** ಸಲ್ಲಿಸಿರುತ್ತಾರೆ.<br><br>ಕಲ್ಲು ಗಣಿ ಗುತ್ತಿಗೆ ಸಂಖ್ಯೆ: 581ರ ವಿವರ:<br><br>• ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಹುಲುವೇನಹಳ್ಳಿ ಗ್ರಾಮದ ಸ.ನಂ. 29 ರ 7-00 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಶ್ರೀ ಎಸ್.ಆರ್. ಉದಯಶಂಕರ್ ಹೆಸರಿಗೆ ಕಲ್ಲು ಗಣಿ ಗುತ್ತಿಗೆ ಸಂಖ್ಯೆ **581** ಅನ್ನು **10** ವರ್ಷಗಳ ಅವಧಿಗೆ ದಿನಾಂಕ: **17-11-2005** ರಿಂದ ಜಾರಿಗೆ ಬರುವಂತೆ ಗುತ್ತಿಗೆ ಕರಾರು ಅಮಲ್ಜಾರಿ ಮಾಡಲಾಗಿದೆ.<br>• ನಂತರದಲ್ಲಿ ಸದರಿ ಕಲ್ಲು ಗಣಿ ಗುತ್ತಿಗೆಯನ್ನು ದಿನಾಂಕ: **16-11-2015** ರಿಂದ ಜಾರಿಗೆ ಬರುವಂತೆ **20** ವರ್ಷಗಳ ಅವಧಿಗೆ ದಿನಾಂಕ: **29-04-2016** ರಂದು ನವೀಕರಿಸಿರುತ್ತಾರೆ.<br>• ಜಿಲ್ಲಾ ಪರಿಸರ ಅಘಾತ ಅಂದಾಜೀಕರಣ **(DEIAA)** ಪ್ರಾಧಿಕಾರದಿಂದ ಪತ್ರ ಸಂಖ್ಯೆ: **DEIAA/BNGU/178/2018-19** ದಿನಾಂಕ: **07-12-2018** ರಂದು ಕಲ್ಲು ಗಣಿಗಾರಿಕೆ ನಡೆಸಲು ಪರಿಸರ ವಿಮೋಚನಾ ಪತ್ರ ಪಡೆದಿರುತ್ತಾರೆ.<br>• ಕರ್ನಾಟಕ ಉಪಖನಿಜ ರಿಯಾಯಿತಿ ನಿಯಾಮವಳಿ **1994**ರ ನಿಯಮ-8ಜಿ ರಂತೆ ಕಲ್ಲುಗಣಿಗಾರಿಕೆ ನಡೆಸಲು ಕ್ವಾರಿ ಪ್ಲಾನ್ ಅನುಮೋದನೆಯಾಗಿರುತ್ತದೆ ಹಾಗೂ **2023-24**ನೇ ಸಾಲಿನಿಂದ **2027-28**ನೇ ಸಾಲಿನವರೆಗೆ ಕ್ವಾರಿ ಪ್ಲಾನ್ ಚಾಲ್ತಿಯಲ್ಲಿರುತ್ತದೆ.<br>• ಕಲ್ಲುಗಣಿ ಗುತ್ತಿಗೆ ಸಂಖ್ಯೆ: 581 ಕ್ಕೆ ಡಿ.ಜಿ.ಎಂ.ಎಸ್ ಸಂಸ್ಥೆಯಿಂದ **Labour Identification Number (LIN):- 2-1164-0048-8** ಹಾಗೂ **Mine Code:519922** ಅನ್ನು ಪಡೆದಿದ್ದು, ಸದರಿ ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ಸುರಕ್ಷಿತಾ ಗಣಿಗಾರಿಕೆ ಸಂಬಂಧ ಡಿ.ಜಿ.ಎಂ.ಎಸ್ ಸಂಸ್ಥೆಯಿಂದ **Metalliferous Mines Regulations 1961** ರನ್ವಯ ನಿಯಮ 106(2)(ಬಿ) ರಂತೆ ದಿನಾಂಕ:23.06.2022 ರಂದು ಅನುಮತಿ ಪಡೆದಿದ್ದು, **05** ವರ್ಷಗಳ ವರೆಗೆ ಚಾಲ್ತಿಯಲ್ಲಿರುತ್ತದೆ.<br>• **Second class Manager** ಹಾಗೂ **Mining Mate** ರವರನ್ನು ನೇಮಕಗೊಂಡಿರುವ ಬಗ್ಗೆ **Certificate** ಸಲ್ಲಿಸಿರುತ್ತಾರೆ<br>ಈ ಮೇಲ್ಕಂಡ ಎರಡು ಕಲ್ಲುಗಣಿ ಗುತ್ತಿಗೆಗಳಿಗೆ ಗಣಿಗಾರಿಕೆ ನಿರ್ವಹಣೆ ಸಂಬಂಧ ಎಲ್ಲಾ ಅಗತ್ಯ ದಾಖಲಾತಿಗಳಿದ್ದು, ಆದರೆ ಗಣಿ ಸುರಕ್ಷತಾ ಕ್ರಮಗಳನ್ನು ಅನುಸರಿಸದೇ ನಿರ್ಲಕ್ಷ ತೋರಿರುವುದರಿಂದ ಅವಘಡ ಸಂಭವಿಸಿದ್ದು, ಸದರಿ ಕಲ್ಲುಗಣಿ ಗುತ್ತಿಗೆಗಳನ್ನು ಗಣಿಗಾರಿಕೆ ನಡೆಸದಂತೆ ನಿಲಂಬನಗೊಳಿಸಲಾಗಿದೆ.<br><br>ಕಲ್ಲುಗಣಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಲ್ಲಿ ನಿರ್ಲಕ್ಷ ತೋರಿ ಅವಘಡ ಸಂಭವಿಸಲು ಕಾರಣರಾದ ಕಲ್ಲುಗಣಿ ಗುತ್ತಿಗೆದಾರರ ವಿರುದ್ಧ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಮೊಕ್ಕದಮ ಸಂಖ್ಯೆ: **206/2026** ರಂತೆ ಪ್ರಕರಣವನ್ನು ದಾಖಲಿಸಲಾಗಿದೆ. |
| ಈ) | ಮೃತ ಕಾರ್ಮಿಕರ ಕುಟುಂಬಗಳಿಗೆ ಸರ್ಕಾರ ಎಷ್ಟು ಪರಿಹಾರವನ್ನು ಘೋಷಿಸಿದೆ: | • ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಅವಘಡಗಳು ಸಂಭವಿಸಿ ಕಾರ್ಮಿಕರು ಮೃತಪಟ್ಟಲ್ಲಿ/ಗಾಯಗೊಂಡಲ್ಲಿ ಕಲ್ಲುಗಣಿ ಗುತ್ತಿಗೆದಾರನೇ ಕಾರ್ಮಿಕ ಇಲಾಖೆಯ ಕಾಯ್ದೆ ಮತ್ತು ನಿಯಮಾನುಸಾರ ಪರಿಹಾರವನ್ನು ನೀಡಬೇಕಾಗಿರುತ್ತದೆ.<br>• ಅವಘಡಗಳು ಸಂಭವಿಸಿ ಮೃತಪಟ್ಟ ವ್ಯಕ್ತಿಯ ಕುಟುಂಬದ |

<table>
<tr><td></td><td></td><td>ವಾರಸುದಾರರಿಗೆ ಹಾಗೂ ಗಾಯಗೊಂಡ ಕಾರ್ಮಿಕರಿಗೆ ಪರಿಹಾರ ವಿತರಿಸುವಂತೆ ಸರ್ಕಾರದಿಂದ ಗುತ್ತಿಗೆದಾರನಿಗೆ ಸೂಚಿಸಿ ಪರಿಹಾರ ನೀಡಲು ಕ್ರಮಕೈಗೊಳ್ಳಲಾಗಿರುತ್ತದೆ.<br>• ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ದಕ್ಷಿಣ ತಾಲ್ಲೂಕು ಹುಲುವೇನಹಳ್ಳಿ ಗ್ರಾಮದ ಸರ್ವೆ ನಂ.29ರಲ್ಲಿ ಮಂಜೂರು ಮಾಡಿರುವ ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಸಂಭವಿಸಿರುವ ಅವಘಡದಲ್ಲಿ ಮೃತಪಟ್ಟಿರುವ 07 ಕಾರ್ಮಿಕರುಗಳ ಪೈಕಿ ಒಬ್ಬರ ಕುಟುಂಬ ವಾರಸುದಾರರಿಗೆ ರೂ.10.00 ಲಕ್ಷ ಮತ್ತು ಗಾಯಗೊಂಡಿರುವ 05 ವ್ಯಕ್ತಿಗಳ ಪೈಕಿ ಒಬ್ಬರಿಗೆ ರೂ.5.00 ಲಕ್ಷ ಪರಿಹಾರವನ್ನು ನೀಡಲಾಗಿರುತ್ತದೆ.<br>• ಉಳಿದ 06 ಮೃತಪಟ್ಟವರ ಕುಟುಂಬದ ವಾರಸುದಾರರಿಗೆ ಹಾಗೂ ಗಾಯಗೊಂಡ 05 ವ್ಯಕ್ತಿಗಳಿಗೆ ಪರಿಹಾರದ ಮೊತ್ತವನ್ನು ನೀಡಲು ಕಲ್ಲುಗಣಿ ಗುತ್ತಿದಾರರು ಸಮ್ಮತಿಸಿದ್ದು, ಸದರಿ ಕುಟುಂಬದವರು ಉತ್ತರ ಭಾರತದವಾಗಿರುವುದರಿಂದ ಅವರುಗಳ ಕಾನೂನು ಬದ್ಧ ವಾರಸುದಾರರನ್ನು ಪತ್ತೆ ಹಚ್ಚುವ ಕಾರ್ಯ ಪ್ರಗತಿಯಲ್ಲಿದೆ</td></tr>
<tr><td>ಉ)</td><td>ರಾಜ್ಯದಲ್ಲಿನ ಕಲ್ಲು ಕ್ವಾರಿಗಳಲ್ಲಿ ಕಾರ್ಮಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಯಾವ ಹೊಸ ಸುರಕ್ಷತಾ ಮಾರ್ಗಸೂಚಿಗಳು ಹಾಗೂ ಮೇಲ್ವಿಚಾರಣಾ ವ್ಯವಸ್ಥೆಯನ್ನು ಜಾರಿಗೆ ತರಲಿದೆ;</td><td rowspan="2">ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಸುರಕ್ಷಿತ ಗಣಿಗಾರಿಕೆ ಮತ್ತು ಕಾರ್ಮಿಕರ ಸೌಲಭ್ಯಗಳ ಕುರಿತಂತೆ ಪ್ರಮಾಣಿತ ಕಾರ್ಯವಿಧಾನ (Standard Operating Procedure) ಜಾರಿ ಮಾಡುವ ಕುರಿತು ಹಾಗೂ ಕಲ್ಲುಗಣಿ ಗುತ್ತಿಗೆ/ ಲೈಸೆನ್ಸ್ ಪ್ರದೇಶಗಳಲ್ಲಿ ಗಣಿಗಾರಿಕೆ ಮತ್ತು ಗಣಿ ಸಂಬಂಧಿತ ಚಟುವಟಿಕೆಗಳನ್ನು ಸುರಕ್ಷಿತವಾಗಿ, ಪರಿಸರ ಸ್ನೇಹಿಯಾಗಿ ನಡೆಸಲು ಮತ್ತು ಕಾರ್ಮಿಕರುಗಳಿಗೆ ಉಂಟಾಗುವ ಜೀವಹಾನಿ ಪ್ರಕರಣಗಳು ಮರುಕಳಿಸದಂತೆ ಎಚ್ಚರಿಕೆ ವಹಿಸುವ ದೃಷ್ಟಿಯಿಂದ ಹಾಗೂ ಕಾರ್ಮಿಕರ ಸುರಕ್ಷತೆ ಮತ್ತು ಭದ್ರತೆಗೆ ಆದ್ಯತೆ ನೀಡಲು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಲ್ಲುಗಣಿ ಗುತ್ತಿಗೆ/ ಲೈಸೆನ್ಸ್ ಪ್ರದೇಶಗಳನ್ನು ವಿಶೇಷ ಅಭಿಯಾನ (Special Drive) ಮೂಲಕ ಜಿಲ್ಲಾ ಮಟ್ಟದ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿ, ಗುತ್ತಿಗೆ/ ಲೈಸೆನ್ಸ್ ಪ್ರದೇಶಗಳಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಿ, ಅನುಪಾಲನೆ ಪಡೆಯಲು ಜಿಲ್ಲಾ ಮಟ್ಟದ ಅಧಿಕಾರಿಗಳ ಸಮಿತಿ ಹಾಗೂ ಮೇಲ್ವಿಚಾರಣೆಗಾಗಿ ಸರ್ಕಾರದ ಮಟ್ಟದಲ್ಲಿ ಸಮಿತಿಯನ್ನು ರಚಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.</td></tr>
<tr><td>ಊ)</td><td>ರಾಜ್ಯದ ಎಲ್ಲಾ ಕಲ್ಲು ಕ್ವಾರಿಗಳ ಸುರಕ್ಷತಾ ಪರಿಶೀಲನೆ ನಡೆಸಿ, ಅಕ್ರಮವಾಗಿ ಕಾರ್ಯ ನಿರ್ವಹಿಸುತ್ತಿರುವ ಕ್ವಾರಿಗಳನ್ನು ಮುಚ್ಚಲು ಸರ್ಕಾರ ವಿಶೇಷ ಕಾರ್ಯಾಚರಣೆ ನಡೆಸುವುದೇ? (ಮಾಹಿತಿ ನೀಡುವುದು)</td></tr>
</table>

ಸಂಖ್ಯೆ:ಸಿಐ-ಎಂಎಂಎಂ/349/2026

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.